


# ಚಾಲೆಂಜಿಂಗ್ ಚಕ್ರವ್ಯೂಹ



ಪೀಟ್ಸ್‌ಬರ್ಗ್‌ನ ಜೋವೋಸ್ ಹೆಸರಾಂತ ವ್ಯಂಗ್ಯ ಚಿತ್ರಗಾರ. 42 ವರ್ಷ ವಯಸ್ಸಿನ ಈತ ಪ್ರಪಂಚದಲ್ಲೇ ಅತ್ಯಂತ ದೊಡ್ಡದಾದ ಹಾಗೂ ಬಿಡಿಸಲು ಕಷ್ಟಕರವಾದ ಚಕ್ರವ್ಯೂಹವನ್ನು ರಚಿಸಿದ್ದಾನೆ. ಕೈಯಿಂದಲೇ ಬರೆದ ಈ ಚಕ್ರವ್ಯೂಹವು ನೂರಾರು ಅಂಕುಡೊಂಕು ಹಾಗೂ ತೊಡಕು ದಾರಿಗಳಿಂದ ಕೂಡಿದ್ದು, ಗಿನ್ನಿಸ್ ವಿಶ್ವ ದಾಖಲೆಗೆ ಸೇರಲು ಸಜ್ಜಾಗಿದೆ. ಜೋವೋಸ್ ಚಿಕ್ಕವನಿರುವಾಗಲೇ ಈ ತರಹದ ಹಲವು ಗೋಜಲುಗಳಿಂದ ಕೂಡಿದ ಹಾದಿಗಳಿರುವ ವ್ಯೂಹಗಳನ್ನು ಪೇಪರ್ ಮೇಲೆ ಗೀಚುತ್ತಾ, ಗೋಡೆಯ ಮೇಲೆ ಅಂಟಿಸುತ್ತಿದ್ದನಂತೆ. ಬೆಳೆದು ದೊಡ್ಡವನಾಗಿ ಕಾರ್ಟೂನಿಸ್ಟ್ ಆದ ನಂತರ ಜೀವನದಲ್ಲಿ ಏನನ್ನಾದರೂ ಸಾಧಿಸ ಬೇಕೆಂಬ ಅದಮ್ಯ ಆಸೆ ಮೊಳೆಯಿತಂತೆ. ವ್ಯೂಹ ರಚನೆಯಲ್ಲಿ ಗಿನ್ನಿಸ್ ವಿಶ್ವ ದಾಖಲೆಗಳನ್ನು ಮಾಡಿದವರ ಬಗ್ಗೆ ಮಹತ್ತರ ಸಂಶೋಧನೆ ಕೈಗೊಂಡ ನಂತರ ಅತ್ಯಂತ ದೊಡ್ಡ ಚಕ್ರವ್ಯೂಹವನ್ನು ಕೈಯಿಂದಲೇ ಬರೆಯಲು ಮನಸ್ಸು ಮಾಡಿದನು. ಜುಲೈ 27 ರಂದು ಪ್ರಾರಂಭಿಸಿದ ಜೋವೋಸ್, ಸೆಪ್ಟೆಂಬರ್ ತಿಂಗಳ ಕೊನೆಗೆ ಇದನ್ನು ರಚಿಸಿ ಮುಗಿಸಿದ್ದಾನೆ. ಅನೇಕ ಯೂ ತಿರುವುಗಳು, ಪರಸ್ಪರ ಛೇದನಗಳ ರಸ್ತೆಗಳು, ಕಟ್ಟ ಕಡೆಯ ದಾರಿಗಳು, ಕಪ್ಪೆ, ಪ್ಯಾನ್ ಕೇಕ್, ಜೋಕರ್ ಮುಂತಾದ (ವಿ)ಚಿತ್ರಗಳಿಂದ ಕೂಡಿದ ಈ ಮಾಸ್ಟರ್ ಪೀಸ್ 35 ಅಡಿ ಉದ್ದ ಹಾಗೂ 4 ಅಗಲವಿದೆ. ಬಲು ಕಷ್ಟಕರವಾದ ಈ ಚಕ್ರವ್ಯೂಹವನ್ನು ರಚಿಸುವುದೇ ಒಂದು ಸವಾಲು ಆಗಿದ್ದರೆ, ಇದನ್ನು ಬಿಡಿಸಲು ತಯಾರಿರುವವರನ್ನು ಹುಡುಕುವುದೇ ಜೋ ವೋಸ್‌ನಿಗೆ ಬಲು ದೊಡ್ಡ ಸಮಸ್ಯೆಯಾಗಿದೆಯಂತೆ. ಯಾಕೆಂದರೆ ಇದನ್ನು ಪರಿಹರಿಸಲು ಕನಿಷ್ಠ ಪಕ್ಷ 30 ರಿಂದ 40 ಗಂಟೆಗಳು ಬೇಕು.ಇದನ್ನು ಬಿಡಿಸಲು ಮನೆಯವರನ್ನು, ಗೆಳೆಯರನ್ನು, ಸಂಬಂಧಿಕರನ್ನು ಈತ ಕೇಳಿಕೊಂಡಿದ್ದಾನೆ. ಆದರೆ ಅವರೆಲ್ಲರೂ ಚಿಕ್ಕದಾಗಿದ್ದರೆ ಬಿಡಿಸಬಹುದಾಗಿತ್ತು. ಆದರೆ ಇದು ತುಂಬಾ ದೊಡ್ಡದಿದೆ. ಆದ್ದರಿಂದ ನಮ್ಮ ಕೈಯಲ್ಲಿ ಸಾಧ್ಯವಿಲ್ಲ ಎಂದು ಕೈಚೆಲ್ಲಿದ್ದಾರೆ. ಗಿನ್ನಿಸ್ ದಾಖಲೆಯ ನಿಯಮದ ಪ್ರಕಾರ ಯಾರಾದರೂ ಈ ಚಕ್ರವ್ಯೂಹವನ್ನು ಬಿಡಿಸಿದ ನಂತರವೇ ರಚನೆಕಾರನಿಗೆ  ಗಿನ್ನಿಸ್ ವಿಶ್ವ ದಾಖಲೆಯ ಕೀರ್ತಿ ಲಭಿಸುತ್ತದೆ. ಆದ್ದರಿಂದ ಜೋವೋಸ್ ಇದನ್ನು ಬಿಡಿಸಲು ಮುಂದೆ ಬರುವ ಮಹಾನುಭಾವರಿಗಾಗಿ ಹುಡುಕಾಟ ನಡೆಸಿದ್ದಾನೆ.

■ ವಿದ್ಯಾ ವಿ. ಹಾಲಭಾವಿ